RegdNo B G155 Sri (1392) 29–7–1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು – ಆರ್ಯಮನೆಸಂಸ್ಥೇದಾರ್ ಎಂ ವೆಂ ಸುಬ್ಬರಾಯುರು ಸಂಪಾದಕರು – ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ 2

ಕಲಕತಾದಲಿ ಲಾಠಿ ಧಾರ್ಜು ಆಶುವಾಯು ಪ್ರಯೋಗ

★

ಕಲ್ಕತ್ತಾ— ಟ್ರಾಂ ದರನೆ ವಿದ್ಯಾರ್ಥಿಗಳ ಚಳವಳಿಯು ವಿಕೋಪಕ್ಕೇ ದಿನವಾಗ ನಿಷೇತೀವ್ರ ರೀತಿಗಿಟ್ಟುಕೊಂಡಿತು — ಜೀವ ವಿವೂ ಕಾರ್ಪೊರೇಷನು ಕಟ್ಟಡದ ಹತ್ತಿರಂ ಪೋಲೀಸರಿಗೂ ಎಂಡು ಸಾವಿರ ವಿದ್ಯಾರ್ಥಿಗಳ ಮೆಂವಣಿಗೆ ತಂಡಕ್ಕೂ ಘರ್ಷಣೆಯಾಗಿ ಪೋಲೀಸರು ಅಶ್ರುವಾಯು ಪ್ರಯೋಗ ಮತ್ತು ಲಾಠಿಭಾರ್ಜು ನಡೆಯಿತು : 17 ಮಂದಿ ವಿದ್ಯಾರ್ಥಿಗಳೂ 12 ಮಂದಿ ಪೋಲೀಸರೂ ಗಾಯಗೊಂಡರು : ಸಂಕಾಂವು ಈ ಚಳವಳಿ ಬಗ್ಗೆ ಚರ್ಚೆ ದಲ್ಲಿ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳುವುದಾಗಿ ಎಚ್ಚರಿಕೆ ಇತ್ತಿರುವರು — ಸ್ಕೂಲು ಕಾಲೇಜುಗಳಲ್ಲಿವುಜ್ಜಲ್ಪಟ್ಟವು ಡಿಪೋವಿನಿಂದ ಟ್ರಾಮುಗಳು ಹೊಂಟಾಗ ಅವನ್ನು ಅಡ್ಡಗಟ್ಟಿ ವಿದ್ಯಾರ್ಥಿ ಮಿತ್ರ ಕರ ಗುಂಪು ಕಲ್ಲೆಸೆತ — ಓಡುತ್ತಿದ್ದ ಟ್ರಾಂಗಳ ಪೇಲೆ ಪಟಾಕಿಗಳನ್ನು ಎಸೆದು ಹತ್ತಿಸಲಾಯಿತು : ಆದರೆ ಸ್ವಲ್ಪ ಡ್ಯಾಮೇಜಾಯಿತು — 19 ಮಂದಿ ದಸ್ತಗಿರಿ ಮಾಡಲ್ಪಟ್ಟರು. —

★

ಸಿಲೋನಿನಲ್ಲಿ

ಗೂಲಂಬೊ— ಸಂಕಾರಿ ಚಟುವಟಿಕೆ ಯನ್ನು ಬಿಡಮೇಲು ಮಾಡುವ ಸರ್ಕಾರಿ ವಿತ್ತು ಸೈನ್ಯದ ಉನ್ನತಾಧಿಕಾರಿಗಳನು ತೆಗೆದುಹಾಕುವುದು ತಮ್ಮ ಕರ್ತವ್ಯವಾಗಿದೆಯೆಂದು ಪ್ರಧಾನಿಗಳು ಪ್ರತಿನಿಧಿ ಸಭೆಯಲ್ಲಿ ಹೇಳಿದರು.

★

ಮೈಸೂರು ಯಾತ್ರಿಕರಿಗೆ

ತಿರುಪತಿ— ತಿರುಪತಿ ಮತ್ತು ತಿರುವಲೆಯಲ್ಲಿ ಮೈಸೂರು ಯಾತ್ರಿಕರಿಗೆ ಹೆಚ್ಚು ಸ್ಥಳ ಏರ್ಪಡಿಸಲು ಮೈಸೂರು ಸರಕಾರ ಯೋಚಿಸಿದೆ

ಪ್ರಧಾನಿಗಳು ಬೆಲ್ಗ್ರೇಡಿನಲ್ಲಿ

ಭಾರತ ಪ್ರಧಾನಿ ಶಾಸ್ತ್ರಿಗಳು ನಿನೆಯುಗೋಸ್ಲೊವಿಯಾಕ್ಕೆ ನಾಲ್ಕು ದಿನಗಳ ಭೇಟಿಗೆ ಬಂದಾಗ ಅದ್ದೂರಿ ಸ್ವಾಗತ ದೊರೆಯಿತು — ಅವರೂ ಮತ್ತು ಅಧ್ಯಕ್ಷ ಟೀಟೋ ಅಂತರರಾಷ್ಟ್ರೀಯ ಭೀಕರ ಪರಿಸ್ಥಿತಿ, ವಿಯಟ್ನಾಂ ಉತ್ಕಟತೆ ವಸ್ಥೆ, ಶಾಂತಿ ನೆಲೆಸುವ ರೀತಿ ಇತ್ಯಾದಿ ಚರ್ಚಿಸುವರು

★

ನಂದಾ ನುಡಿ

ತಿರುವೇಂಡ್ರಂ — ವಾವು ಕಮ್ಯೂನಿಸ್ಟರ ಬಗ್ಗೆ ದಯಾಳತ್ವ ತೋರಿಸುವಂತಿಲ್ಲ ವೆಂದು ಭಾರತ ಗೃಹಮಂತ್ರಿ ನಂದಾರು ಹೇಳಿದರು

●

ವಿಯಟ್ನಾಂ

ವಾಷಿಂಗ್ಟನ್— ವಿಯಟ್ನಾಮಿನಲ್ಲಿ ಅಮೆರಿಕಾ ಸೈನ್ಯವು 75000 ದಿಂದ 125000 ಕ್ಕೆ ಹೆಚ್ಚಿಸಲಾಗುವುದಾಗಿ ಅಧ್ಯಕ್ಷ ಜಾನ್ಸನ್ ಪ್ರಕಟಿಸಿದರು

★

ಭಾವೆಯವರ ಭಾವನೆ

ಚಾಂದಾ— ರಾಷ್ಟ್ರೀಯ ಇಂಡೋ-ಪಾಕ್ ಒಪ್ಪಂದಕ್ಕೆ ವಿನೋದಾ ಭಾವೆ ಸಂತೋಷಪಟ್ಟು, ತಮ್ಮ ನೆರೆಯವರೊಡನೆ ಒಳ್ಳೇ ಸ್ನೇಹಭಾವದಿಂದಿರಬೇಕೆಂದು ಹೇಳಿದರು.

★

ನ್ಯಾಯಬೆಲೆ ಅಂಗಡಿ

ಶರೀಕೆರೆಯಲ್ಲಿ ಅಗಸ್ಟಿನಿಂದ ನ್ಯಾಯಬೆಲೆ ಅಂಗಡಿಗಳು ತೆರೆಯಲಾಗುವುದೆಂದು ವದಿಯಾಗಿದೆ

ಅಧ್ಯಕ್ಷರ ಒಪ್ಪಿಗೆ

ಬೆಂಗಳೂರು— ರಾಷ್ಟ್ರಾಧ್ಯಕ್ಷರು 1965 ರ ವೈಸೂರು ಭೂಸುಧಾರಣೆ (ತಿದ್ದುಪಡಿ) ನ ಸೂದೆಗೆ ಜುಲೈ 18 ರಂದು ತಮ್ಮ ಅಂಗೀಕಾರ ವಾದ್ಯೆಯನ್ನೊತ್ತಿದಾರೆ.

★

2 ರೂ ಚಿನ್ನಕ್ಕೆ ರೂ 10000 ದೊರೆಯಿತು

ನವದೆಹಲಿ — ಅಂಧ್ರದ ಒಬ್ಬ ಉಪಾಧ್ಯಾಯನು ತನ್ನ ಆಸ್ತಿಯೆಲ್ಲ ಇದೆಂದು ಹೇಳಿ ರೂ 2 ಬಾಳುವ ಸಣ್ಣ ಚಿನ್ನದ ಚೂರನ್ನು ನ್ಯಾಷನಲ್ ಫೌಂಡೇಷನ್ ಫಾರ್ ಟೀಚರ್ಸ್ ವೆಲ್ಫೇರ್ ಸಂಸ್ಥೆಗೆ ಕೊಟ್ಟಿದ್ದನ್ನು ಬರೋಡಾದ ಒಂದು ವಾಣಿಜ್ಯ ಸಂಸ್ಥೆ 10 ಸಾವಿರ ರೂಗಳಿಗೆ ತೆಗೆದುಕೊಂಡು ಸಂಸ್ಥೆಯಲ್ಲಿಟ್ಟಿದೆ

★

ಭಾವೆಯಿಂದ ಒದ್ದಾಟ

ಚಾಂದಾ— ವಿಹಾರಾಷ್ಟ್ರ ಮತ್ತು ವೈಸೂರು ಗಡಿ ವಿಷಯದಲ್ಲಿ ಜಗಳ ಮಾಡಬಾರದೆಂದೂ ಅನ್ಯೋನ್ಯ ಪ್ರೀತಿಯಿಂದ ಪರಿಹರಿಸಿಕೊಳ್ಳಬೇಕೆಂದೂ ತೋರಿದ ಭಾವೆಯವರು ಸೂಚಿಸಿದಾರೆ ; ನಾವೆಲ್ಲಾ ಒಂದು ರಾಷ್ಟ್ರದವರಿರುವಾಗ ನೆ ಏಕೀಕರಣ ಹೇಗಾದರೆ ಏನು, ಎಂದಾರೆ

★

ಒಂಟಿ, ಕತೆ

ಹಾಲು

ನವದೆಹಲಿ— ಒಂಟೀ ಹಾಲನ್ನು ಮಾನವರು ಸೇವಿಸಬಹುದೇ ಎಂದು ಪರೀಕ್ಷೆಮಾಡಲು ನೇಮಿಸಲಾಗಿದ್ದ ಫುಡ್ ಸ್ಟ್ಯಾಂಡರ್ಡಿನ ಕೇಂದ್ರ ಪರಿಮಿತಿಯು ಒಂಟೀ ಹಾಲು ಮಾತ್ರವಲ್ಲದೆ ಕತ್ತೇ ಹಾಲನ್ನೂ ಉಪಯೋಗಿಸಬಹುದೆಂದು ಶಿಫಾರಸು ಮಾಡಿದೆ.

ಎಲ್ ಐ ಸಿ

ಬೊಂಬಾಯಿ— ಎಲ್ ಐ ಸಿ ಬೋರ್ಡಿಗೂ ನೌಕರರ ಸಂಘಕ್ಕೂ ಆಗಿರುವ ಒಪ್ಪಂದ ಪ್ರಕಾರ ಸಂಸ್ಥೆಯ ಪ್ರಥಮ ತರಗತಿಯ ಅಧಿಕಾರಿಗಳು ಹೆಚ್ಚು ಸಂಬಳ ಪಡೆಯುತ್ತಾರೆ

★

ಗೋವಾ ಬಗ್ಗೆ ಚರ್ಚೆ

ಕೊಯಮತ್ತೂರು— ಗೋವಾ ವಿಚಾರದಲ್ಲಿ ವಿದೇಶಾಂಗ ಮಂತ್ರಿ ಸ್ವರ್ಣ ಸಿಂಗ್ ಮತ್ತು ವೈಸೂರು ಮುಖ್ಯ ಮಂತ್ರಿಗಳು ಚರ್ಚಿಸಲು ಒಪ್ಪಿರುವರೆಂದು ಕಾಂಗ್ರೆಸ್ಸು ಅಧ್ಯಕ್ಷ ಕಾಮರಾಜರಂ ಪೊಳ್ಳಾಚಿಯಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ಹೇಳಿದರು.

★

ರೇಷನಿಂಗು

ನವದೆಹಲಿ— ಇಲ್ಲಿ ತಾ|| 31 ರಲ್ಲಿ ನಡೆಯುವ ಮುಖ್ಯ ಮಂತ್ರಿಗಳು ನೇಮಿಸಿರುವ ಮಂತ್ರಿಗಳ ಸವಿತಿಯು, ಪ್ರಮುಖ ನಗರ ವತ್ತು ಪಟ್ಟಣಗಳಲ್ಲಿ ಕ್ರಮಬದ್ಧ ಅಥವಾ ಅನೌಪಚಾರಿಕ ರೇಷನಿಂಗನ್ನು ಜಾರಿಗೆ ತರುವ ವಿಷಯ ಪರಿಶೀಲಿಸುವುದು.

★

ಸುಂಕ ತೆರಿಗೆ

ನವದೆಹಲಿ— ಕೇಂದ್ರ ಸರ್ಕಾರದವರು 65–66 ರ ಹಣಕಾಸಿನ ವರ್ಷದ ಮೊದಲನೆಯ ಎಂಡು ತಿಂಗಳಲ್ಲಿ ತೆರಿಗೆ ಮತ್ತು ಸುಂಕಗಳನ್ನು ವಿಧಿಸಿ ಆ ಮೂಲಕ ವಸೂಲಾಡಿದ ಹಣ ರೂ 243-91 ಕೋಟಿ ರೂಗಳಷ್ಟಾಗಿದೆ

★

ನಾಳೆಯ ಹರಿಚಾರಿಗ

ದೈವಜ್ಞ ಶಿರೋಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪಕ್ಕ ಕೃಷ್ಣಜೋಯಿಸಂವರಿಂದ

30 ಶ.ಕ್ರವಾರ ಬಿದಿಗೆ ಮುಖ

ಶ್ರೀ ಚಂದ್ರಗುಂಡ ಶಿವಾಚಾರ್ಯರ ಮಹಿಮೆ

★

ಶ್ರೀಶೈಲ ಸೂರ್ಯಸಿಂಹಾಸನದ ಇತಿಹಾಸದಲ್ಲಿ ಪೂರ್ಣಚಂದ್ರನಂತೆ ಪ್ರಕಾಶಿಸಿದ ಚಿಕ್ಕಳಕಮೂರ್ತಿ ಚಂದ್ರಗುಂಡ ಶಿವಾಚಾರ್ಯರ ಚರಿತ್ರೆಯನ್ನು, ಅವರ ವಂಶ, ಕೀರ್ತಿ ಮತ್ತು ಪವಾಡಗಳೊಡನೆ ಹೃದಯಂಗಮವಾಗಿ ಜಡ ಸಿದ್ದವರು ವಿವರಿಸಿದ್ದಾರೆ.

ಚಂದ್ರಗುಂಡ ಶಿವಾಚಾರ್ಯರು ಸಕಲ ಜನರ ಉದ್ಧಾರಕ್ಕಾಗಿ ಶ್ರಮಿಸಿದ್ದಾರೆ ; ಅಂದು ರೂಪಿಸಿದ ಸಮಾಜತತ್ವವನ್ನು ಸುವರ್ಣ ಅಕ್ಷರಗಳಿಂದ ಬರೆದಿಡುವಂತಿದೆ : ಶ್ರೀಶೈಲ ಪೀಠಕ್ಕೆ ಅಚ್ಚಳಿಯದ ವಂಶವೆಯನ್ನು ತಂದ ವಂಶಾವತಾರಣ ; ಆಚಾರ್ಯರು ಕಾರ್ತವೀರ್ಯಾರ್ಜುನನ ಸಂತತಿಯವರಿಗೆ ಶಾಸನವೊಪ್ಪಿಸಿದ ಪವಾಡ ಮಹತ್ವವಾದುದು ; ವಿಶ್ವಪ್ರಸಿದ್ಧವಾದ ಬೇಸಿಗೆಯು ಬೀಡಾದ ನಂದಿಬೆಟ್ಟದಲ್ಲಿ ನಂದಿಯನ್ನು ಸ್ಥಾಪಿಸಿ, 'ನಂದಿಬೆಟ್ಟ' ಎಂದು ನಾಮಕರಣಮಾಡಿ ಅದು ಕೀರ್ತಿಗೆ ಕಾರಣಪುರುಷರಾದರು ; ಗುರುವಿಗೆ ತೆಂಗಿನವರ ತಾನೇ ಬಗ್ಗಿ ನಾರಿಕೇಳ ಫಲವನ್ನು ಕೊಟ್ಟು ನೆಲೆ ನಿಲ್ಲಿಸಿದ್ದ ಪವಾಡ ಅವರ ಮಹಿಮಾನ್ವಿತ ವ್ಯಕ್ತಿತ್ವದ ನಿದರ್ಶನವಾಗಿದೆ. ಚೋಳದೇಶದಲ್ಲಿ ಕಳಿತ ಗುರುಗಳು ಪ್ರಾಣತ್ಯಾಗ ಮಾಡಿ ಅಲ್ಲಿದ್ದ ಕಶ್ಮಲವನ್ನು ನಿರ್ಮೂಲೋತ್ಪಾಟನ ಮಾಡಿ, ರಾಜಸೇವೆಯನ್ನು ಸ್ವೀಕರಿಸಿ, ಅಲ್ಲಿ ಬೃಹನ್ಮಠವನ್ನು ಸ್ಥಾಪಿಸಿ ಶಿವಾನುಭವ ಕಿರಣವನ್ನು ಪ್ರಕಟಿಸಿ ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸಿದ್ದರಿಂದ ಚೋಳಭೂಪಾಲನು ಆಭರಣತಾಳ್ಯ ಬಿರುದುಗಳನ್ನಿತ್ತು ಸನ್ಮಾನಿಸಿ ಪೂಜಿಸಿದನು ; ಚಂದ್ರಗುಂಡು ಚೋಳರಾಜನ ಭಕ್ತಿಗೆ ವಿಚ್ಛಿದ್ರ ವರ್ಣ ವ್ಯಸ್ತಿ ಕರೆಸಿ ದೇಶವ ಸಂರಕ್ಷಣೆಯನ್ನು ಹೆಚ್ಚಿಸಿದರು ; ಅನಂತರ ರಾಜಧಾನಿಗೆ ಬಂದು ವೀರಭದ್ರನನ್ನು ಸ್ಥಾಪಿಸಿದರು ; ಗೂಳೂರಿಗೆ ಬಂದು ಪಾತಾಳ ಗಂಗೆಯನ್ನು ಬರಿಸಿ ಪವಾಡವನ್ನು ತೆರೆಸಿ ಜನತೆಗೆ ದಿವ್ಯೋಪದೇಶವನ್ನು ಮಾಡಿ ಅಚಲಾದರ್ಶ ಕೀರ್ತಿಯನ್ನು ಪಡೆದ ಮಹಾಮಹಿಮರು. [ಕನ್ನಡ ನಾಡಿ]

—o—

ತುಳು ಗಾದೆಗಳು

ಸತ್ಯವಿದ್ದರೆ ಎತ್ತಲೂ ಭಯವಿಲ್ಲ.
ಅಂತಃಕರಣದಿಂದ ಕೊಟ್ಟಿದ್ದ ಅಮೃತ.
ಉತ್ತಮರಂ ಮಾತು ಕೇಳಿದರೆ ಉತ್ತಮ.
ಒಡಿಸಿದ ಸವಿಯೂಟವನ್ನು ಬಿಟ್ಟು ಭಿಕ್ಷಾನ್ನಕ್ಕೆ ಕೈಯೊಡ್ಡಿದ ಹಾಗೆ.

ಆಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ
ರೋಗಿಗಳಿಗೆ ಶೀಘ್ರ ಔಷಧಿ ಕೊಡಲಾಗುತ್ತದೆ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

Quality Printi g — Neat Binding

Lakshminarasimha Press

Sivarampet, Mysore

ವುಡಲಾಂಡ್ಸ್

30-7-65 ರಿಂದ

ಅಮೋಘ ಅಭಿನಯ

ಜಾಕುಲ್ ಪುಬರ್ಜಿ — ರಾಜಶ್ರೀಯವರ ಕಲಾತ್ಮಕ ಅಧಿನಯದಿಂದ ಕೂಡಿದ

.... ಚಿತ್ತಾಕರ್ಷಕ ಹಿಂದಿ ಚಿತ್ರಗಳು ....

ಜೀ ಚಾಹ್‌ತಾ ಹೈ

★ Ji Chahta Hai ★

ಸಂಗೀತ : ಕಲ್ಯಾಣಜೀ ಆನಂದಜೀ — [ಪ್ರತಿ ದಿನ 3 ಪ್ರದರ್ಶನಗಳು

ಅಪೆರ— 30-7-65 ರಿಂದ

ದೊರಕಿತೆ ದೊಂಗಲು (ತೆಲುಗು)

ನಟವರ್ಗ— ಎಸ್ ವಿ ರಾಮುರಾವ್, ಕಾಂತಾರಾವ್, ರಾಜಶ್ರೀ, ರಾಜಲಲಿತ ಜಮುನಾ, ಗುರ್ಮುಡಿ, ರಮಣರೆಡ್ಡಿ, ನಾಗಯ್ಯ

[ತೆಲುಗು ಚಿತ್ರದಾರಿ ಚಿತ್ರ] [ಪ್ರತಿ ದಿನ 3 ಆಟಗಳು

SHAKTI SUDHA

A Superb Tonic

Protect the Cow



ಗೋಸಂರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

Edited, Printed & Published by Dharma prachara niratha
M S Krishna R ao (Proprietor) at the Satyavadi Press
Chamarajapuram, Mysore 4